<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.69/2017

ಚಾಸಾ-2 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 27.03.2019

| | | |
|---|---|---|
| ಹೆಸರು | ಃ | ಮಂಜುನಾಥ ಶಿರವಾಳ |
| ತಂದೆ ಹೆಸರು | ಃ | ಮಹಾಂತಪ್ಪ |
| ವಯಸ್ಸು | ಃ | 23-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಸಾಗನೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಸಾಕ್ಷಿ ಘಟನಾ ಸ್ಥಳದ ಹಾಗೂ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಏನನ್ನೂ ಜಪ್ತಿಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 14.03.2017 ರಂದು ಬೆಳಿಗ್ಗೆ 10.30 ಗಂಟೆಗೆ 4 ರಿಂದ 6 ನೇ ಆರೋಪಿತರು ಸಾಗನೂರ ಬಸನಿಲ್ದಾಣದ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾಗ ಚಾಸಾ-1 ರವರು ಸಿಬ್ಬಂದಿ ಸಹಾಯದಿಂದ ದಾಳಿ ಮಾಡಿ ಅವರ ಕಡೆಯಿಂದ 1) 650 ಎಂಎಲ್ ಅಳತೆಯ 48 ಬಿಯರ ಬಾಟಲಿಗಳು, 2)

90 ಎಂಎಲ್ ಅಳತೆಯ ಒಸಿ ವಿಸ್ಕಿ ತುಂಬಿದ 1056 ಟೆಟ್ರಾ ಪಾಕೇಟುಗಳು, 3) 180 ಎಂಎಲ್ ಅಳತೆಯ ಒಸಿ ವಿಸ್ಕಿ ತುಂಬಿದ 144 ಟೆಟ್ರಾ ಪಾಕೇಟುಗಳು, 4) 180 ಎಂಎಲ್ ಅಳತೆಯ ಒಟಿ ವಿಸ್ಕಿ ತುಂಬಿದ 192 ಟೆಟ್ರಾ ಪಾಕೇಟುಗಳು, ಮದ್ಯ ಮಾರಾಟ ಮಾಡಲು ಉಪಯೋಗಿಸಿದ ಜೀಪ್ ನಂ.ಕೆಎ-32/ಎಂ-573 ಹಾಗೂ ಮದ್ಯ ಮಾರಾಟದ ರೂ.1200/- ಗಳನ್ನು ಜಪ್ತಿಪಡಿಸಿಕೊಂಡು, ಶ್ಯಾಂಪಲ್ ವರದಿಗಾಗಿ ಜಪ್ತಿಪಡಿಸಿಕೊಂಡ ಎಲ್ಲ ನಮೂನೆ ಮದ್ಯದಿಂದ ಪೌಚಗಳನ್ನು ತೆಗೆದು ಶೀಲ್ ಮಾಡಿ ಪಂಚನಾಮೆ ಬರೆದು ಓದಿ ಹೇಳಿ ನನ್ನ ಹಾಗೂ ಚಾಸಾ-3 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ